**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ-72 ರಡಿ ಮಂಡಿಸಿರುವ ಸೂಚನೆಗೆ ಉತ್ತರ.**

**ವಿಷಯ:-** ಸರ್ಕಾರಿ ಮಟ್ಟದ ಅತಿ ದೊಡ್ಡ ಕ್ಯಾನ್ಸರ್ ಆಸ್ಪತ್ರೆಯೆಂಬ ಹೆಗ್ಗಳಿಕೆಯ ಕಿದ್ವಾಯಿ ಆಸ್ಪತ್ರೆಯಲ್ಲಿ ಸುಮಾರು 185ಕ್ಕಿಂತ ಅಧಿಕ ರೋಗಿಗಳು ಕಳೆದ ಜೂನ್ ನಿಂದ ಇಲ್ಲಿಯವರೆಗೂ ಎಂಆರ್ಐ ಮತ್ತು ಮೆಮೋಗ್ರಫಿ ಪರೀಕ್ಷೆಗಾಗಿ ಕಾಯುವಂತ ಪರಿಸ್ಥತಿ ಎದುರಾಗಿದೆ. ಕಾರಣ ಪ್ರಸ್ತುತ ಇರುವಂತಹ ಎಂ ಆರ್ ಐ ಮತ್ತು ಮೆಮೋಗ್ರಫಿ ಕಾರ್ಯನಿರ್ವಸುತ್ತಿಲ್ಲ, ರೋಗಿಗಳ ದಾಖಲಾತಿ ವಿಭಾಗದಲ್ಲಿ ರೋಗಿಗಳ ದೂರವಾಣಿ ಸಂಖ್ಯೆಯನ್ನು ಇಲ್ಲಿನ ಸಿಬ್ಬಂದಿ ಪಡೆದು ಎಂಆರ್ಐ ಯಂತ್ರವನ್ನು ಸರಿಪಡಿಸಿದ ನಂತರ ಕರೆಮಾಡಿ ತಿಳಿಸಲಾಗುವುದು ಎಂದು ಹೇಳುತ್ತಾರೆ ಈ ಅವ್ಯವಸ್ಥೆಯ ಬಗ್ಗೆ.

******

**ಉತ್ತರ:-** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದ MRI ಹಾಗೂ ಮೆಮೋಗ್ರಫಿ ಯಂತ್ರಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ, ಸದರಿ ಯಂತ್ರಗಳು ಸ್ಥಗಿತಗೊಂಡಿದ್ದವು. ಕೂಡಲೇ ತಾಂತ್ರಿಕ ಬಿಡಿಭಾಗವನ್ನು ಆಮದು ಮಾಡಿಕೊಂಡು ಅಳವಡಿಸಲಾಗಿದೆ. ದಿನಾಂಕ:19.07.2025 ರಿಂದ MRI ಹಾಗೂ ಮೆಮೋಗ್ರಫಿ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ. ಆದಾಗ್ಯೂ, ಸದರಿ ಯಂತ್ರಗಳು ದುರಸ್ಥಿಯಲ್ಲಿದ್ದಾಗ ಕಿದ್ವಾಯಿ ಆಸ್ಪತ್ರೆಯಲ್ಲಿ ಬರುವ ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ನಿಮ್ಹಾನ್ಸ್ ಮತ್ತು ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ MRI ನಡೆಸಲು ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತು.

ರೋಗಿಗಳ ಚಿಕಿತ್ಸೆಗೆ ಅನುಗುಣವಾಗಿ ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ MRI ಉಪಕರಣವನ್ನು ಹೊರತುಪಡಿಸಿ, MRI 3.0 Tesla ಉಪಕರಣವನ್ನು ಖರೀದಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ದಿನಾಂಕ:05.08.2025ರಂದು ಜರುಗಿದ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಮತ್ತೊಂದು MRI 1.5 Tesla ಉಪಕರಣವನ್ನು ಖರೀದಿಸಲು ಅನುಮೋದನೆ ಪಡೆಯಲಾಗಿದೆ. ಈ ಎರಡೂ ಉಪಕರಣಗಳನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮೂಲಕ ಕೆ.ಟಿ.ಪಿ.ಪಿ. ಕಾಯ್ದೆಯನುಸಾರ ಖರೀದಿಸಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಪ್ರಸ್ತುತ ರೋಗಿಗಳು ಚಿಕಿತ್ಸೆಗಾಗಿ ಕಾಯುವ ಪರಿಸ್ಥಿತಿ ಇರುವುದಿಲ್ಲ.

**ಸಂಖ್ಯೆ:** ಎಂಇಡಿ 134 ಕೆಯುಎಂ 2025

**(ಡಾ: ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.